


International Journal of Kannada Research
www.kannadajournal.com

**ISSN: 2454–5813**
IJKR 2020; 6(2): 23-26
© 2020 IJKR
www.kannadajournal.com
Received: 16-02-2020
Accepted: 18-03-2020

**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ, ಮದ್ರಾಸು ವಿಶ್ವವಿದ್ಯಾಲಯ ಮರೀನಾ ಆವರಣ, ಚೆನ್ನೈ

**Corresponding Author:**
**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ, ಮದ್ರಾಸು ವಿಶ್ವವಿದ್ಯಾಲಯ ಮರೀನಾ ಆವರಣ, ಚೆನ್ನೈ

# ವಚನಗಳಲ್ಲಿ ವ್ಯಕ್ತಿತ್ವ ವಿಕಸನದ ಚಿಂತನೆಗಳು

**ಡಾ. ಎಂ. ರಂಗಸ್ವಾಮಿ**

ಹನ್ನೆರಡನೇ ಶತಮಾನದ ನಡುಗನ್ನಡ ಸಾಹಿತ್ಯದಲ್ಲಿ ರಚನೆಗೊಂಡು, ಅದೇ ಕಾಲಾವಧಿಯಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿ ಪ್ರಚಾರವಾದ ಕನ್ನಡ ಸಾಹಿತ್ಯದ ಒಂದು ವಿಶೇಷ ಪ್ರಕಾರವೇ ವಚನಸಾಹಿತ್ಯ. ಕನ್ನಡದ ಆಡುಭಾಷೆಯನ್ನು ಬಳಸಿಕೊಂಡು ವಚನಕಾರರು ಸಾವಿರಾರು ವಚನಗಳನ್ನು ರಚಿಸಿ, ಅವುಗಳಿಗೆ ಹೊಸ ಶಕ್ತಿ, ರೂಪವನ್ನು ಕೊಡುವಲ್ಲಿ ಅವರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಅವರು ಮುಖ್ಯವಾಗಿ ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮಾಜಿಕ ಏಳ್ಗೆಗಾಗಿ, ಜನಜಾಗೃತಿಗಾಗಿ, ಆತ್ಮೋದ್ಧಾರ, ವ್ಯಕ್ತಿತ್ವ ವಿಕಸನಕ್ಕಾಗಿ ಶ್ರಮಿಸಿದವರು. ಸರ್ವರ ಉದ್ಧಾರಕ್ಕೆ ಪಣತೊಟ್ಟು ನಿಂತ ವಚನಕಾರರ ಜೀವಪರ ಚಿಂತನೆಗಳು ಅವರ ವಚನಗಳಲ್ಲಿ ಮಡುಗಟ್ಟಿ ನಿಂತಿವೆ. ಅನುಭವ ಹಾಗೂ ಅಭಿವ್ಯಕ್ತಿ ಎರಡರಲ್ಲೂ ಅವರ ವಚನಗಳು ಅತ್ಯಂತ ವಿಶೇಷವಾಗಿವೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಪ್ರಮುಖ ವಚನಕಾರರು ತಂತಮ್ಮ ವಚನಗಳಲ್ಲಿ ಅನಾವರಣಗೊಳಿಸಿರುವ ವ್ಯಕ್ತಿತ್ವ ವಿಕಸನದ ಚಿಂತನೆಗಳನ್ನು ಕುರಿತು ಚರ್ಚಿಸಲು ಉದ್ದೇಶಿಸಲಾಗಿದೆ.
ಮನುಷ್ಯನ ವ್ಯಕ್ತಿತ್ವದ ವಿಕಸನವನ್ನು ಹಲವು ಬಗೆಯ ಚಿತ್ರ, ರೂಪಕಗಳ ಮೂಲಕ ವಚನಕಾರರು ಪ್ರತಿಪಾದಿಸಿದ್ದಾರೆ. ಅವರು ಮಾನವ ಜೀವನದಲ್ಲಿ ತೋರುವ ಅಸಮತೆಯನ್ನು ಕಂಡು ತಳಮಳಗೊಂಡು ಅದನ್ನು ಹೋಗಲಾಡಿಸಲು ನಿರಂತರ ದುಡಿದವರು. ಸತ್ಯಶುದ್ಧವಾದ ಕಾಯಕದಲ್ಲಿ ತೊಡಗಿ ಪ್ರೇಮ, ಸಹನೆ, ಕ್ಷಮೆ, ಕರುಣೆ, ನಿರಹಂಕಾರ–ಮುಂತಾದ ಸದ್ಗುಣಗಳಿಂದ, ಸದಾಚಾರಗಳಿಂದ ಮಾನವನ ವ್ಯಕ್ತಿತ್ವ ವಿಕಸನ ಹೊಂದಲು ಪ್ರಯತ್ನಿಸಿದವರು.

**“ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ**
**ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಾಪೇಕ್ಷೆ**
**ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ**
**ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ**
**ಸೌರಾಷ್ಟ್ರ ಸೋಮೇಶ್ವರ ಲಿಂಗವು ಬೇರಿಲ್ಲ ಕಾಣಿರೋ(ಡಾ. ಎಚ್. ತಿಪ್ಪೇರುದ್ರಸ್ವಾಮಿ 1998 : 41)”**

ಎಂದು ಆದಯ್ಯ ಹೇಳುವ ಮಾತುಗಳು ಭಕ್ತನ ವ್ಯಕ್ತಿತ್ವವನ್ನು ತಿಳಿಸುತ್ತವೆ. ಭಕ್ತನ ಅಂದರೆ ವ್ಯಕ್ತಿಯ ವ್ಯಕ್ತಿತ್ವವು ಹೆಚ್ಚು ಉಜ್ವಲವಾಗಿ ಮುಂದುವರಿಯಬೇಕು. ವ್ಯಕ್ತಿಗೆ ತಾನು ಹಿಡಿದ ಆದರ್ಶದಲ್ಲಿ ಅಚಲವಾದ ಶ್ರದ್ಧೆ ಏಕೈಕ ನಿಷ್ಠೆ ಅತ್ಯಗತ್ಯ. ನೂರಾರು ಕಡೆ ಹರಿದಾಡುವ ಮನಸ್ಸನ್ನು ಕೇಂದ್ರೀಕರಿಸಿ ದೃಢವಾದ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ ಎಂಬ ಆಶಯವನ್ನು ಮೇಲಿನ ಸಾಲುಗಳು ಒತ್ತಿ ಹೇಳುತ್ತವೆ. ಹಾಗೆಯೇ ಇನ್ನೊಬ್ಬ ವಚನಕಾರ ದೇವರ ದಾಸಿಮಯ್ಯ

**“ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲಿರ್ದಡೇನು?**
**ಅದು ಪಟ್ಟಣವೆಂದೆನಿಸುವುದು.**
**ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ**
**ಅದು ನಟ್ಟಡವಿ ಕಾಣಾರಾಮನಾಥ! (ಡಾ. ಎಚ್. ತಿಪ್ಪೇರುದ್ರಸ್ವಾಮಿ 1998 : 41)”**

ಎಂದಿದ್ದಾನೆ. ಭಕ್ತನಾದವನಿಗೆ ನಿಷ್ಠೆಯೊಂದಿದ್ದರೆ ಆತ ತನ್ನ ಜೀವನದ ಏರುಪೇರುಗಳಿಗೆ ಹೆದರದೆ, ತನಗೆ ಎದುರಾಗುವ ಎಡರುತೊಡರುಗಳನ್ನೆಲ್ಲಾ ಎದುರಿಸಿ ಅವುಗಳನ್ನು ಪರಿಹರಿಸಿಕೊಂಡು ತನ್ನ ಸಾಧನೆಯಲ್ಲಿ

ಮುಂದುವರಿಯುತ್ತಾನೆ. ಅವನಿದ್ದ ನಟ್ಟಡವಿ ಕೂಡ ಪಟ್ಟಣವಾಗಿ ಪರಿಣಮಿಸುತ್ತದೆ. ಬದುಕಿನಲ್ಲಿ ಒದಗಿ ಬರುವ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಜಯಿಸ ಬಲ್ಲ ಶಕ್ತಿ ಆತನಿಗಿರುತ್ತದೆ. ಮನುಷ್ಯನ ಪ್ರಮುಖ ವ್ಯಕ್ತಿತ್ವವಾದ ನಿಷ್ಠೆಯನ್ನು ಕುರಿತು ದಾಸಿಮಯ್ಯ ತನ್ನ ವಚನದಲ್ಲಿ ಮನೋಜ್ಞವಾಗಿ ಅನಾವರಣಗೊಳಿಸಿದ್ದಾರೆ.

**ಇನ್ನು ಬಸವಣ್ಣನವರು**
**"ಕಳಬೇಡ ಕೊಲಬೇಡ,**
**ಹುಸಿಯ ನುಡಿಯಲು ಬೇಡ,**
**ಮುನಿಯ ಬೇಡ,**
**ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಬೇಡ,**
**ಇದಿರ ಹಳಿಯಲು ಬೇಡ,**
**ಇದೇ ಅಂತರಂಗಶುದ್ಧಿ!**
**ಇದೇ ಬಹಿರಂಗಶುದ್ಧಿ!**
**ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ(ಡಾ. ಎಲ್. ಬಸವರಾಜು 2000 : 76)"**

ಎನ್ನುತ್ತಾರೆ. ಅಂತರಂಗ ಬಹಿರಂಗಗಳೆರಡೂ ಶುದ್ಧವಾಗಿರಬೇಕೆಂಬುದೇ ವೇದ, ಆಗಮ, ಶಾಸ್ತ್ರ, ಪುರಾಣ ಮುಂತಾದ ಎಲ್ಲಾ ಧರ್ಮವಾಣಿಯ ಮರ್ಮ ಧ್ವನಿ. ಕಾಯ, ಮಾತು, ಮನಸ್ಸು ಈ ಮೂರರ ಶುದ್ಧಿಯೂ ಅಗತ್ಯವಾಗಿ ಆಗಬೇಕು. ಕಳವು, ಕೊಲೆ–ಇವು ಕಾಯದೋಷಗಳು; ಅಂದರೆ ದೇಹದಿಂದ ಘಟಿಸುವಂತಹವು. ಹುಸಿ, ಕೋಪಿಸಿಕೊಳ್ಳುವುದು– ಮಾತುಗಳಿಂದ ಆಗುವಂಹವು. ಇನ್ನುಳಿದ ಮೂರು ಮಾನಸಿಕವಾಗಿ ನಡೆಯುವಂತಹವು. ಹಾಗಾಗಿ ಬಸವಣ್ಣನವರು ಮಾನವನ ಗಮನವನ್ನು ಆದ್ಯಂತವಾಗಿ ಅವನ ನಿತ್ಯಜೀವನದ ವ್ಯವಹಾರಗಳತ್ತ ಸೆಳೆದು, ಅಲ್ಲಿ ಆಯ ತಪ್ಪದಿರಲೆಂದು ಕರೆ ನೀಡಿದರು. ಕಳ್ಳತನ ಮಾಡಬೇಡ, ಕೊಲ್ಲಬೇಡವೆನ್ನುತ್ತ ಕಾಯಶುದ್ಧಿಯನ್ನೂ, ಸುಳ್ಳನ್ನು ಹೇಳಬೇಡ, ಪರದೂಷಣೆಯಲ್ಲಿ ನಿರತನಾಗಬೇಡ, ಆತ್ಮಪ್ರಶಂಸೆಯಲ್ಲಿ ತೊಡಗಬೇಡವೆನ್ನುತ್ತ ವಾಕ್ ಶುದ್ಧಿಯನ್ನೂ, ಕೋಪಿಸಬೇಡಿ, ಅನ್ಯರಿಗೆ ಅಸಹಿಷ್ಣುತೆಯನ್ನು ಸೂಚಿಸಬೇಡಿ ಎನ್ನುತ್ತ ಮನಶುದ್ಧಿಯನ್ನೂ ನಿರ್ದೇಶಿಸಿ, ಇದೇ ಅಂತರಂಗ ಶುದ್ಧಿ; ಇದೇ ಬಹಿರಂಗ ಶುದ್ಧಿಯೆಂದಿದ್ದಾರೆ. ಇಂತಹ ವ್ಯಕ್ತಿತ್ವಗಳನ್ನು ಮಾನವ ರೂಢಿಸಿಕೊಂಡು ಆರೋಗ್ಯವಂತ ಸಮಾಜವನ್ನಾಗಿ ಮಾಡುವ ಕಾಯಕದಲ್ಲಿ ತೊಡಗಬೇಕೆಂದು ಬಸವಣ್ಣನವರು ಸಾರಿ ಸಾರಿ ಹೇಳಿರುವರು.
ಬಸವಣ್ಣನವರ ಇನ್ನೊಂದು ವಚನವನ್ನು ಗಮನಿಸಬಹುದಾಗಿದೆ.

**"ದಯವಿಲ್ಲದ ಧರ್ಮವದೇವುದಯ್ಯ,**
**ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ!**
**ದಯವೇ ಧರ್ಮದ ಮೂಲವಯ್ಯ.**
**ಕೂಡಲಸಂಗಯ್ಯನಂತಲ್ಲದೊಲ್ಲ ಕಂಡಯ್ಯ(ಡಾ. ಎಲ್. ಬಸವರಾಜು 2000 : 77–78)"**

ಪ್ರಸಿದ್ಧವಾದ ಈ ವಚನ ಧರ್ಮದ ಮೂಲಭೂತ ಲಕ್ಷಣವನ್ನು ಸೂತ್ರರೂಪವಾಗಿ ನಿರೂಪಿಸುತ್ತದೆ. ಒಬ್ಬರ ಕಷ್ಟ ಸುಖಗಳಿಗಾಗಿ ಮತ್ತೊಬ್ಬರು ಮಿಡುಕಿ ತೋರಿದ ಅನುಕಂಪವೇ ಸಮಾಜದ ಏಳ್ಗೆಗೆ, ಅನ್ಯೋನ್ಯತೆಗೆ ಅಡಿಪಾಯವಾಗುತ್ತದೆ. ಪರಸ್ಪರಲ್ಲಿ ಸೂತ್ರಪ್ರಾಯವಾಗಿರುವುದು ಸಹಾನುಭೂತಿ. ಆ ಸಹಾನುಭೂತಿಯಿಂದ ಉದ್ಭವಿಸಿದ ಅನುಕೂಲ ಪ್ರತಿಕ್ರಿಯೆಯ ಸ್ಪಷ್ಟ ರೂಪವೇ ದಯೆ. ಈ ದಯೆಯ ಮೂಲಾಂಶವಿಲ್ಲದೆ ಯಾವ ಧರ್ಮವೂ ತನ್ನ ಮೂಲೋದ್ದೇಶವಾದ ಸಮಷ್ಟಿಹಿತವನ್ನು ಕಿಂಚಿತ್ತೂ ಸಾಧಿಸದೆ, ಅಸೂಯೆ, ಅಹಿತ ಸ್ಪರ್ಧೆ, ವೈರ ವಿಧ್ವಂಸನೆಗಳಿಗೆ ಅವಕಾಶಮಾಡಿ ಕೊಟ್ಟು ಸರ್ವನಾಶವನ್ನುಂಟು ಮಾಡುವುದು. ಆದುದರಿಂದಲೇ 'ದಯೆ' ಎಂಬ ವ್ಯಕ್ತಿತ್ವ ಪ್ರತಿಯೊಬ್ಬರಲ್ಲೂ ಇದ್ದು ಅದನ್ನು ಎಲ್ಲರೂ ಅನುಸರಿಸಬೇಕಾಗಿದೆ ಎಂದು ಬಸವಣ್ಣನವರು ಒತ್ತಿ ಒತ್ತಿ ಮತ್ತೆ ಮತ್ತೆ ಹೇಳಿರುವರು. ಹಾಗೆಯೇ ಬಸವಣ್ಣನವರು ಮತ್ತೊಂದು ವಚನದಲ್ಲಿ ವ್ಯಕ್ತಿತ್ವ ವಿಕಸನವನ್ನು ಬಹಳ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ

**"ಏನಿ ಬಂದಿರಿ, ಹದುಳಿದ್ದಿರೆಂದರೆ**
**ನಿಮ್ಮ ಮೈಸಿರಿ ಹಾರಿಹೋಹುದೇ?**
**ಕುಳ್ಳಿರೆಂದರೆ ನೆಲ ಕುಳಿಹೋಹುದೇ?**
**ಒಡನೆ ನುಡಿದರೆ ಶಿರಹೊಟ್ಟೆ ಒಡೆವುದೆ?**
**ಕೊಡಲಿಲ್ಲದಿದ್ದರೊಂದು**
**ಗುಣವಿಲ್ಲದಿದ್ದರೆ**
**ಕೆಡಹಿ ಮೂಗ ಕೊಯ್ವುದ ಮಾಬನೆ ಕೂಡಲಸಂಗಯ್ಯ? (ಡಾ. ಎಲ್. ಬಸವರಾಜು 2000 : 77)"**

ಮನೆಗೆ ಬಂದವರನ್ನು ಪ್ರೀತಿ ವಿಶ್ವಾಸದಿಂದ ಮಾತನಾಡಿಸಿ, 'ಏನು ಬಂದಿರಿ? ಕ್ಷೇಮವೇ?' ಎಂದು ಒಳ್ಳೆಯ ಮಾತುಗಳನ್ನಾಡಿ ವಿಚಾರಿಸಬೇಕು. ಆದರೆ ಕೆಲವರು ಸೊಕ್ಕಿನಿಂದ ಆ ರೀತಿ ನಡೆದುಕೊಳ್ಳುವುದಿಲ್ಲ. ಹಾಗೆ ಕೇಳುವುದರಿಂದ ನಿಮ್ಮ ದೊಡ್ಡಸ್ತಿಕೆ ಹಾರಿಹೋಗುತ್ತದೆಯೇ? ಮನೆಗೆ ಬಂದ ಅತಿಥಿಗಳಿಗೆ ವಿಶ್ವಾಸದಿಂದ ಕುಳಿತುಕೊಳ್ಳಿರಿ ಎಂದರೆ ಅವರು ಕುಳಿತ ನೆಲವೇನು ಕುಳಿ ಬೀಳುವುದೇ? ಅವರೊಂದಿಗೆ ಪ್ರೀತಿಯಿಂದ ಮಾತನಾಡಿದರೆ ನಿಮ್ಮ ಹೊಟ್ಟೆ–ತಲೆ ಒಡೆದು ಹೋಳಾಗಿ ಹೋಗುತ್ತದೆಯೇ? ಬಂದ ಅತಿಥಿಯನ್ನು ತಕ್ಷಣ ಮಾತನಾಡಿಸದೆ ಬಹಳ ಕಾಲ ಸತಾಯಿಸಿ, ಗರ್ವದಿಂದ ಮಾತನಾಡಿಸುವವರ ಅನುಚಿತ ವರ್ತನೆಯನ್ನು ಖಂಡಿಸುತ್ತಾ ಬಸವಣ್ಣನವರು ಈ ಮಾತುಗಳನ್ನು ಹೇಳುತ್ತಾರೆ. ದಾನ ಕೊಡುವ ಶಕ್ತಿ ಇಲ್ಲದಿದ್ದರೆ ಪರವಾಗಿಲ್ಲ. ಅವರಿಗೆ ಏನೂ ಕೊಡುವುದು ಬೇಡ. ಆದರೆ ಮರ್ಯಾದೆಯಿಂದ ನಡೆಸಿಕೊಳ್ಳುವುದರಿಂದೇನು ನಷ್ಟ? ವಿನಯ ಗುಣವಿಲ್ಲದಿದ್ದರೆ ಅಂತಹವರನ್ನು ಶಿವನು ಮೆಚ್ಚುವುದಿಲ್ಲ. ಕೂಡಲಸಂಗಮದೇವನು ಅಂತಹವರನ್ನು ಕೆಡಹಿ ಮೂಗು ಕೊಯ್ಯುತ್ತಾನೆ. ಅಂದರೆ, ಅವರನ್ನು ಶಿಕ್ಷಿಸುತ್ತಾನೆ ಎಂದು ಬಸವಣ್ಣನವರು ಈ ವಚನದಲ್ಲಿ ಹೇಳಿದ್ದಾರೆ.
ಬಂದವರಿಗೆ ಏನನ್ನಾದರೂ ಕೊಡಲು ನಮ್ಮಲ್ಲಿ ಚೈತನ್ಯವಿಲ್ಲದಿರಬಹುದು. ಆದರೆ ನಮ್ಮಲ್ಲಿ ತಮ್ಮ ಕಷ್ಟಗಳನ್ನು ತೋಡಿಕೊಂಡು ಹೃದಯ ಭಾರವನ್ನಿಳಿಸಿಕೊಳ್ಳಲು ಬಂದ ನೊಂದ ಸಹಜೀವಿಗಳಿಗೆ ಸಹಾನುಭೂತಿಯನ್ನು ಸೂಚಿಸಿ, ಸಂತೈಕೆಯ ಮಾತೊಂದಾಡಲು ಬಂದ ಬರವೇನು? ಕೊಡಲು ಇಲ್ಲದಿದ್ದರೇನು? ಕೊಡದಿದ್ದರೇನು? ಗುಣವಿಲ್ಲದಿದ್ದರೆ ಅಂತಹವರನ್ನು ದೇವರು ಕೆಳಕ್ಕೆ ಕುಕ್ಕಿ ಕೊರಳು ಮೆಟ್ಟಿ ಮೂಗನ್ನು ಕೊಯ್ಯದೆ ಬಿಡನು.
ಆದುದರಿಂದ ನಿಮ್ಮ ಮನೆಗೆ ಬಂದವರನ್ನು ಕುರಿತು, 'ಏನು ಬಂದಿರಿ ಚೆನ್ನಾಗಿರುವಿರಾ?' ಎನ್ನಿ. ಅಷ್ಟರಿಂದ ನಿಮ್ಮ ಮೈ ಕುಂದಿ ಹೋಗುವುದಿಲ್ಲ. ಕುಳಿತುಕೊಳ್ಳಿರಿ ಎನ್ನಿ. ನಿಮ್ಮ ಮನೆಯಲ್ಲಿ ಅವರು ಕುಳಿತೆಡೆ ಕುಳಿಯಾಗುವುದಿಲ್ಲ. ಬಂದೊಡನೆ ಒಂದು ಒಳ್ಳೆಯ ಮಾತನಾಡಿರಿ. ನಿಮ್ಮ ಶಿರ ಸಿಡಿದು ಹೋಗುವುದಿಲ್ಲ. ಹೊಟ್ಟೆ ಒಡೆದು ಹೋಗುವುದಿಲ್ಲ. ಸತ್ಕಾರ ಸೌಜನ್ಯದ ಗುಣವಿಲ್ಲದಿದ್ದರೆ ಶಿವನು ನಿಮ್ಮನ್ನು ಸರ್ವನಾಶ ಮಾಡುವನು. ಏಳಿ ಎಚ್ಚರಗೊಳ್ಳಿ.

ಸಿರಿಯ ಗರ ಹೊಡೆದ ಅಹಂಕಾರಿಗಳು ಮನೆಗೆ ಬಂದ ಅತಿಥಿಗಳ ಬಳಿ ಅಗೌರವದಿಂದ ನಡೆದುಕೊಳ್ಳುವುದನ್ನು ಇಲ್ಲಿ ಖಂಡಿಸಲಾಗಿದೆ. ಮನೆಗೆ ಯಾರಾದರೂ ಬಂದಾಗ ಏನು ಕಾರಣದಿಂದ ಬಂದಿರಿ? ಕ್ಷೇಮವೇ ಎಂದು ಕೇಳಿದರೆ ನಿಮ್ಮ ಸಂಪತ್ತು ಮಾಯವಾಗಿ ಬಿಡುವುದೇ? ಬನ್ನಿ ಆಯಾಸವಾಗಿರಬಹುದು, ಸ್ವಲ್ಪ ವಿಶ್ರಮಿಸಿಕೊಳ್ಳಿ ಎಂದರೆ ನಿಮ್ಮ ನೆಲ ತಗ್ಗಾಗಿ ಬಿಡುವುದೇ? ಬಂದವರೊಡನೆ ತಡ ಮಾಡದೆ ಕೂಡಲೇ ಮಾತನಾಡಿದ್ದೇ ಆದರೆ ನಿಮ್ಮ ತಲೆ, ಹೊಟ್ಟೆ ಹೋಳಾಗಿ ಬಿಡುತ್ತದಯೇ? ಮನೆಗೆ ಬಂದವರು ಏನನ್ನಾದರೂ ಬೇಡಿದರೆ ನಿಮಗೆ ಕೊಡಲಾಗದಿದ್ದರೆ, ಸೌಜನ್ಯದ ಮಾತನ್ನೂ ಆಡುವ ಒಳ್ಳೆಯತನವಿಲ್ಲದಿದ್ದರೆ ಕೂಡಲಸಂಗಮದೇವರು ನಿಮ್ಮನ್ನು ಕೆಡಹಿ ಮೂಗನ್ನು ಕತ್ತರಿಸದೆ ಬಿಡುತ್ತಾನೆಯೇ? ಎಂದು ಮನುಷ್ಯರಿಗೆ ಇರಲೇಬೇಕಾದ ಸೌಜನ್ಯಗಳನ್ನು ಕುರಿತು ಬಸವಣ್ಣನವರು ಹೀಗೆ ಹೇಳುತ್ತಾರೆ.

ಅಲ್ಲಮಪ್ರಭುರವರು 12ನೇ ಶತಮಾನದಲ್ಲಿ ಬಸವ ಕಲ್ಯಾಣದಲ್ಲಿ ಸ್ಥಾಪಿತವಾದ ಅನುಭವ ಮಂಟಪದ ಮುಖ್ಯಸ್ಥರಾಗಿದ್ದರು. ಮೂಲತಃ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯವರು. ಶರಣರ ನಡೆ–ನುಡಿ–ಸಿದ್ಧಾಂತಕ್ಕೆ ಮೆಚ್ಚಿ ಕಲ್ಯಾಣದ ಕಡೆ ಬಂದು ಶರಣ ಬಳಗದಲ್ಲಿ ಒಗ್ಗೂಡಿ ನೂರಾರು ವಚನಗಳನ್ನು ರಚಿಸಿದ್ದಾರೆ. ಉಜ್ವಲವಾದ ರೂಪಕಗಳನ್ನು ಬಳಸಿ ಧರ್ಮಚಿಂತನೆ, ವ್ಯಕ್ತಿತ್ವ ವಿಕಸನ, ಆಧ್ಯಾತ್ಮಿಕ ಚಿಂತನೆಗಳನ್ನು ಕುರಿತು ಅನೇಕ ಅನುಭಾವಿ ವಚನಗಳನ್ನು ರಚಿಸಿದ್ದಾರೆ. ಅಲ್ಲಮಪ್ರಭುದೇವರ ವಚನಾಂಕಿತನಾಮ ಗುಹೇಶ್ವರ. ಹಾಗಾಗಿ ಅಲ್ಲಮ ಪ್ರಭುವಿನ ವಚನವೊಂದರಲ್ಲಿ ಔಚಿತ್ಯಪೂರ್ಣವಾಗಿ ಮೂಡಿಬಂದಿರುವ ವ್ಯಕ್ತಿತ್ವ ವಿಕಸನದ ಕುರಿತ ವಿಚಾರಗಳನ್ನು ಗಮನಿಸಬಹುದಾಗಿದೆ.

**"ಕಾಲುಗಳೆರಡೂ ಗಾಲಿ ಕಂಡಯ್ಯಾ**
**ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯಾ**
**ಬಂಡಿಯ ಹೊಡೆವರೈವರು ಮಾನಿಸರು**
**ಒಬ್ಬರಿಗೊಬ್ಬರು ಸಮವಿಲ್ಲಯ್ಯ.**
**ಅದರಿಚ್ಚೆಯನರಿದು ಹೊಡೆಯದಿದ್ದರೆ**
**ಅದರಚ್ಚು ಮುರಿಯಿತ್ತು ಗುಹೇಶ್ವರಾ(ಡಾ. ಎಲ್. ಬಸವರಾಜು 1997 : 54)"**

ಮೇಲಿನ ವಚನದಲ್ಲಿ ಅಲ್ಲಮ ಪ್ರಭು ರೂಪಕ ಮೂಲಕ ವ್ಯಕ್ತಿತ್ವ ವಿಕಸನ ಕುರಿತು ಮಾರ್ಗದರ್ಶನ ನೀಡುತ್ತಾರೆ. ಮಾನವನ ದೇಹವನ್ನು ಬಂಡಿಗೆ ಹೋಲಿಕೆ ಮಾಡುವುದರ ಮೂಲಕ ಜೀವನದ ಪಯಣವನ್ನು ಕುರಿತು ಬಹು ಅದ್ಭುತವಾದ ವಿವರಣೆ ನೀಡಿದ್ದಾರೆ.

**'ಕಾಲುಗಳೆರಡೂ ಗಾಲಿ ಕಂಡಯ್ಯ, ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯಾ'** ಮನುಷ್ಯ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕ್ರಮಿಸಬೇಕಾದರೆ ಕಾಲುಗಳೇ ಆಧಾರ. ಮಾನವ ದೇಹ ರಥ ಇದ್ದಂತೆ. ಎರಡು ಕಾಲುಗಳು ಗಾಲಿಗಳಂತೆ ಚಲನೆ ಮಾಡುತ್ತವೆ. ಅಲ್ಲಮನು ಮಾನವನ ದೇಹವನ್ನು ರಥಕ್ಕೆ ಹೋಲಿಸಿದ್ದಾನೆ. ಈ ದೇಹವೆಂಬ ರಥದಲ್ಲಿ ಪಂಚೇಂದ್ರಿಯಗಳೆಂಬ ಮನುಷ್ಯರು ಕುಳಿತುಕೊಂಡಿದ್ದಾರೆ. ಬದುಕಿನ ಬಂಡಿ ಮುಂದೆ ಓಡಿಸುವ ಮಾನಿಸರು ಒಬ್ಬರಿಗೊಬ್ಬರು ಯಾರೂ ಸಮವಿಲ್ಲ ಎಂದು ಹೇಳುತ್ತಾರೆ.

ಮಾನವನಿಗೆ ಪಂಚೇಂದ್ರಿಯಗಳ ಮೇಲೆ ನಿಯಂತ್ರಣ ಇರಬೇಕು. ಬಂಡಿ ಓಡಿಸುವ ಮನುಷ್ಯರು ಐವರಿದ್ದಾರೆ. ಆದರೆ ಒಬ್ಬರ ಮನಸ್ಸು ಒಬ್ಬರಿಗೆ ಸಮವಿಲ್ಲ. ಎಲ್ಲರೂ ಚಂಚಲತೆ ಭಾವದಿಂದ ನಾ ಮುಂದು ತಾ ಮುಂದು ಎಂದು ಜಗಳವಾಡಿದರೆ ಬಂಡಿ ಶಾಂತವಾಗಿ ಸಾಗಬಹುದೇ? ಸಾಧ್ಯವಿಲ್ಲ. ಒಬ್ಬರು ಎಡ, ಮತ್ತೊಬ್ಬರು ಬಲ ಎಂದು ಎಳೆದಾಡಿದರೆ ಬಂಡಿ ನೇರವಾಗಿ ಸಾಗಲು ಸಾಧ್ಯವಿಲ್ಲ. ಆ ಬಂಡಿಯಲ್ಲಿ ಕುಳಿತ ಪಂಚೇಂದ್ರಿಯಗಳ ಇಚ್ಚೆಯ ಪ್ರಕಾರ ಮಾನವ ಜೀವನ ನಾಶವಾಗುತ್ತದೆ ಎಂದು ಅಲ್ಲಮ ಪ್ರಭು ಹೇಳುತ್ತಾರೆ.

ಮಾನವನ ಬದುಕಿನ ಪಯಣದಲ್ಲಿ ಈ ರೀತಿಯ ಹಲವಾರು ಸವಾಲುಗಳು ಎದುರಾಗುತ್ತವೆ. ಎಲ್ಲಾ ಸವಾಲುಗಳು ಸಮವಾಗಿ ಇರುವುದಿಲ್ಲ. ಎಲ್ಲವೂ ಆಚಾರ ವಿಚಾರದೊಂದಿಗೆ ತಾಳ್ಮೆಯಿಂದ ಹತೋಟಿಯಲ್ಲಿಟ್ಟುಕೊಂಡು ಮುನ್ನುಗ್ಗಬೇಕು. ಚಲಿಸುವ ಬಂಡಿಯ ಚಾಲಕರು ಅನುಭಾವಿಗಳು, ಅಚಲ ಮನಸ್ಸಿನವರು, ಪ್ರಜ್ಞಾವಂತರಿರಬೇಕು. ಬಂಡಿ ಸಾಗಬೇಕಾದರೆ ಚಾಲಕರೇ ಪ್ರಧಾನ ಆತ್ಮ. ಆ ಪ್ರಧಾನವಾದ ಪಂಚೇಂದ್ರಿಯಗಳಿಗೆ ಮಾನವನಾದವನು ದಾಸನಾಗದೆ ಹತೋಟಿ ಸಾಧಿಸಬೇಕು.

ವಿವೇಕವಂತ ಚಾಲಕನಿಲ್ಲದಿದ್ದರೆ ಬಂಡಿ ಹಳ್ಳಕ್ಕೆ ಜಾರುತ್ತದೆ. ಹಾಗೇ ಇಂದ್ರಿಯಗಳಿಗೆ ದಾಸನಾಗಿ ಜೀವನ ನಡೆಸಿದರೆ ಬದುಕು ಹಾಳಾಗುತ್ತದೆ. ವ್ಯಕ್ತಿ ತನ್ನ ಗೌರವ, ಘನತೆಗಳನ್ನು ಕಳೆದುಕೊಂಡು ದುಃಖಿತನಾಗುತ್ತಾನೆ. ಮಾನವನು ಗುರುವಿನ ಮಾರ್ಗದರ್ಶನದಲ್ಲಿ ಜೀವನವನ್ನು ಮುನ್ನಡೆಸಬೇಕು. ವಿವೇಚನೆಯಿಂದ ಬದುಕಿನ ಬಂಡಿ ಓಡಿಸಿದರೆ ಅಚ್ಚು ಮುರಿಯಲು ಸಾಧ್ಯವಿಲ್ಲ. ಮನಸ್ಸಿನ ಚಂಚಲತೆ ಭಾವಕ್ಕೆ ನಾವು ಕಡಿವಾಣ ಹಾಕಿದರೆ ಮಾತ್ರ ಜೀವನ ಪಯಣ ಸುಗಮವಾಗಬಹುದು.

ಅಲ್ಲಮ ಪ್ರಭು ಸತ್ಯ, ಜ್ಞಾನ, ಧರ್ಮ, ಭಕ್ತಿಗಳೆಂಬ ಸನ್ಮಾರ್ಗದಲ್ಲಿ ನಡೆಯಬೇಕಾದರೆ ನಾವು ಪ್ರಭುದ್ಧರಾಗಿ ಯೋಚಿಸಬೇಕು; ಅಂತರಂಗವನ್ನು ಪರಿಶುದ್ಧವಾಗಿಸಿಕೊಂಡು ಬದುಕು ಹಸನಾಗಿಸಿಕೊಳ್ಳಬೇಕೆನ್ನುತ್ತಾನೆ. ಅಲ್ಲಮನು ಬದುಕಿನ ನೈಜತೆಯನ್ನು ಕುರಿತು ತುಂಬಾ ಮಾರ್ಮಿಕವಾಗಿ ರೂಪಕಗಳ ಮೂಲಕ ವಿಶ್ಲೇಷಣೆ ಮಾಡಿದ್ದಾನೆ. ಅಲ್ಲಮ ಪ್ರಭುವಿನ ವಚನಗಳು ಮಾನವ ಬದುಕಿಗೆ, ವ್ಯಕ್ತಿತ್ವ ವಿಕಸನಕ್ಕೆ ದಾರಿದೀಪವಾಗುತ್ತವೆ.

ಹನ್ನೆರಡನೇ ಶತಮಾನದಲ್ಲಿ ಅಕ್ಕಮಹಾದೇವಿಯೆಂದೇ ಖ್ಯಾತಳಾಗಿರುವ ಮಹಾದೇವಿಯಕ್ಕನ ವಚನಗಳು ಉಜ್ವಲ ನಕ್ಷತ್ರಗಳಂತಹವು. ಅಕ್ಕ ವಚನ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಟ್ಟ ಕನ್ನಡದ ಪ್ರಥಮ ಶ್ರೇಷ್ಠ ಕವಯಿತ್ರಿಯಾದವಳು. ಹೆಣ್ಣುತನಕ್ಕೆ ವಿಶೇಷವಾದ ಗೌರವ ಭಾವನೆಯನ್ನು ತಂದುಕೊಟ್ಟು ಬಸವ, ಅಲ್ಲಮ ಮೊದಲಾದವರಿಂದ ಸನ್ಮಾನಿತಳಾದವಳು. ವ್ಯಕ್ತಿಯ ವ್ಯಕ್ತಿತ್ವ ವಿಕಸನದ ಬಗ್ಗೆ ವಚನವೊಂದರಲ್ಲಿ ಹೀಗೆನ್ನುತ್ತಾಳೆ.

**"ಮರವಿದ್ದು ಫಲವೇನು ನೆಳಲಿಲ್ಲದನ್ನಕ?**
**ಧನವಿದ್ದು ಫಲವೇನು ದಯವಿಲ್ಲದನ್ನಕ?**
**ಹಸುವಿದ್ದು ಫಲವೇನು ಹಯನಿಲ್ಲದನ್ನಕ?**
**ರೂಪಿದ್ದು ಫಲವೇನು ಗುಣವಿಲ್ಲದನ್ನಕ?**
**ಅಗಲಿದ್ದು ಫಲವೇನು ಬಾನವಿಲ್ಲದನ್ನಕ?**
**ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ?**
**ಚೆನ್ನಮಲ್ಲಿಕಾರ್ಜುನ!(ಡಾ.ಅರವಿಂದ ಮಾಲಗತ್ತಿ 2000 : 63)"**

ಮೇಲಿನ ವಚನದಲ್ಲಿ ಇಷ್ಟ ದೈವದ ಜ್ಞಾನವಿಲ್ಲದ ಇರುವಿಕೆ ಫಲಶೂನ್ಯವೆಂದೂ ಮನುಷ್ಯನ ಬದುಕಿಗೆ ಒಂದು ಉದ್ದೇಶವಿರಬೇಕು ಎನ್ನುತ್ತಾಳೆ ಅಕ್ಕಮಹಾದೇವಿ. ಮರವಿದ್ದು ಏನು ಪ್ರಯೋಜನ ನೆರಳನ್ನು ಕೊಡದಿದ್ದರೆ. ಧನವಂತರಾಗಿದ್ದರೆ ಏನು ಫಲ ದಯೆಯೇ ಇಲ್ಲದಿದ್ದರೆ. ಹಸುವಿದ್ದು ಹಾಲು ನೀಡದಿದ್ದರೆ, ಲಕ್ಷಣವಂತರಾಗಿದ್ದು ಗುಣವಿಲ್ಲದಿದ್ದರೆ, ತಟ್ಟೆಯಿದ್ದು ಅನ್ನವೇ ಇಲ್ಲದಿದ್ದರೆ ಏನು ಉಪಯೋಗವೆಂದು ಅಕ್ಕ ಮರ್ಮ ಧ್ವನಿಯಲ್ಲಿ ಮಾನವನ ವ್ಯಕ್ತಿತ್ವವನ್ನು ಕುರಿತು ನುಡಿದಿರುವುದು

ಗಮನಾರ್ಹವಾಗಿದೆ. ಹೀಗೆ ಅನೇಕ ವಚನಕಾರರು ತಂತಮ್ಮ ವಚನಗಳಲ್ಲಿ ಅತ್ಯಮೂಲ್ಯವಾದ ಮಾನವೀಯ ಮೌಲ್ಯಗಳನ್ನು ಅಭಿವ್ಯಕ್ತಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**

ಡಾ.ಸಿ.ಪಿ.ಪ್ರಭುಸ್ವಾಮಿಮಠ 1996 ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ಶೋಭಾ ಪ್ರೊಸೆಸ್ ಪ್ರಿಂಟರ್ಸ್, ಪುತ್ತೂರು, ದ.ಕನ್ನಡ.

ಡಾ.ಎಲ್. ಬಸವರಾಜು 2000 ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು.

ಡಾ.ಎಲ್. ಬಸವರಾಜು 1997 ಅಕ್ಕನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು.

ಡಾ. ಎಚ್.ತಿಪ್ಪೇರುದ್ರಸ್ವಾಮಿ 1998 ಶರಣರ ಅನುಭಾವ ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

ಡಾ. ಎಲ್. ಬಸವರಾಜು 1997 ಅಲ್ಲಮನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು.

ಡಾ. ಅರವಿಂದ ಮಾಲಗತ್ತಿ(ಸಂ.) 2000 ಕಾವ್ಯ ಸಂಚಯ–3, ಪ್ರಸಾರಾಂಗ, ಮೈಸೂರು ವಿ. ವಿ., ಮೈಸೂರು.